ಕೊಡಗು ಜಿಲ್ಲೆಯಲ್ಲಿರುವ ಅಧಿಕೃತ ಮತ್ತು ಅನಧಿಕೃತ ಮದ್ಯದಂಗಡಿಗಳು

2940:(4016)

ಶ್ರೀ ಹೆಚ್.ಡಿ.ಬಸವರಾಜ್ (ವಿರಾಜಪೇಟೆ): ಮಾನ್ಯ ಅಬಕಾರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಡಗು ಜಿಲ್ಲೆಯಲ್ಲಿರುವ ಸಗಟು ಮದ್ಯದಂಗಡಿಗಳು, ಬಾರ್‌ಗಳು ಮತ್ತು ಸಾರಾಯಿ ಅಂಗಡಿಗಳ ಸಂಖ್ಯೆ ಎಷ್ಟು? ಇವುಗಳಲ್ಲಿ ಎಷ್ಟು ಸರ್ಕಾರದಿಂದ ಅಧಿಕೃತ ಪರವಾನಿಗೆ ಪಡೆದಿವೆ ಮತ್ತು ಯಾವ ತಾಲ್ಲೂಕುಗಳಲ್ಲಿ ಇವೆ? (ವಿವರ ನೀಡುವುದು).

ಆ) ಪರವಾನಗಿ ಇಲ್ಲದ ಮದ್ಯ ಬಾರು ಮತ್ತು ಸಾರಾಯಿ ಅಂಗಡಿಗಳನ್ನು ತೆರವು ಮಾಡಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಜಯವಂತ ಸುಬ್ರಾಯ (ಅಬಕಾರಿ ರಾಜ್ಯ ಸಚಿವರು):

ಅ) ಕೊಡಗು ಜಿಲ್ಲೆಯಲ್ಲಿ ಲೈಸೆನ್ಸ್ ಪಡೆದ ಸಗಟು ಮದ್ಯದಂಗಡಿಗಳು, ಬಾರ್‌ಗಳು ಮತ್ತು ಸಾರಾಯಿ ಅಂಗಡಿಗಳ ತಾಲ್ಲೂಕುವಾರು ಸಂಖ್ಯೆ ಈ ಕೆಳಕಂಡಂತೆ ಇರುತ್ತದೆ.

ವಿವರ	ಮಡಿಕೇರಿ	ಸೋಮವಾರ ಪೇಟೆ	ವಿರಾಜಪೇಟೆ	ಒಟ್ಟು
ಸಿಎಲ್-1 ಸಗಟು ಮದ್ಯದಂಗಡಿಗಳು	2	2	2	6
ಸಿಎಲ್-2 ಮದ್ಯದ ಅಂಗಡಿಗಳು	23	26	40	89
ಸಿಎಲ್-4 ಅಂಗಡಿಗಳು	2	7	9	18
ಸಿಎಲ್-7	1	-	2	3
ಸಿಎಲ್-8	1	-	-	1
ಸಿಎಲ್-9	17	28	17	62
ಸಿಎಲ್-14	1	-	-	1
ಸಾರಾಯಿ ಅಂಗಡಿಗಳು	66	96	93	255

ಆ) ಸಾರಾಯಿ ಅಂಗಡಿಗಳ ಬಗ್ಗೆ ಕೆಲವು ದೂರುಗಳು ಬಂದಿದ್ದು ಈ ಬಗ್ಗೆ

ಇಲಾಖೆಯಿಂದ ನಿಯಮಗಳ ಪ್ರಕಾರ ಕ್ರಮ ಜರುಗಿಸಲಾಗಿದೆ. ಅಕ್ರಮ ಸಾರಾಯಿ ಮಾರಾಟದ ಬಗ್ಗೆ ಕೊಡಗು ಜಿಲ್ಲೆಯಲ್ಲಿ ಒಟ್ಟು 63 ಮೊಕದ್ದಮೆಗಳು ನೋಂದಣಿಯಾಗಿದ್ದು, ಈಗಾಗಲೇ ಮೂರು ತಾಲ್ಲೂಕುಗಳಲ್ಲಿ ಅಕ್ರಮ ಸಾರಾಯಿ ಮಾರಾಟ ಮಾಡುವುದನ್ನು ತಡೆಗಟ್ಟಲು ವಿಶೇಷ 4 ತಂಡಗಳು ಕಾರ್ಯ ಪ್ರವೃತ್ತವಾಗಿರುತ್ತದೆ.

ಕೊಡಗು ಜಿಲ್ಲೆಯಲ್ಲಿ ಅಬಕಾರಿ ಇಲಾಖೆಯ ಸಿಬ್ಬಂದಿಯವರಿಗೆ ತಗಲುವ ವೆಚ್ಚ

2942:(4015)

ಶ್ರೀ ಹೆಚ್.ಡಿ.ಬಸವರಾಜು (ವಿರಾಜಪೇಟೆ): ಮಾನ್ಯ ಅಬಕಾರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಡಗು ಜಿಲ್ಲೆಯಲ್ಲಿ ಕಳೆದ 3 ವರ್ಷಗಳಿಂದ ಅಬಕಾರಿ ಇಲಾಖೆಯವರ ಸಲುವಾಗಿ ಎಲ್ಲಾ ರೀತಿಯಲ್ಲೂ ಅಂದರೆ ಸಿಬ್ಬಂದಿ ವೇತನ, ಬಾಡಿಗೆ ವೇತನ ಮತ್ತು ಸಿಬ್ಬಂದಿ ವಾಹನಗಳ ನಿರ್ವಹಣೆಗಾಗಿ ಎಷ್ಟು ಹಣ ವೆಚ್ಚ ಮಾಡಲಾಗಿದೆ? ಇದರ ಬಗ್ಗೆ ಪ್ರತ್ಯೇಕವಾಗಿ ವೆಚ್ಚ ಮಾಡುತ್ತಿರುವ ಹಣದ ಬಗ್ಗೆ ವಿವರ ನೀಡುವುದು?

ಆ) ಕೊಡಗು ಜಿಲ್ಲೆಯಲ್ಲಿರುವ ಅಬಕಾರಿ ಸಿಬ್ಬಂದಿ ವರ್ಗದವರ ಸಂಖ್ಯೆ ಎಷ್ಟು? ವಾಹನಗಳೆಷ್ಟು? ಹಾಗೂ ಯಾವ ಯಾವ ತಾಲ್ಲೂಕುಗಳಲ್ಲಿ ಎಷ್ಟೆಷ್ಟು ಸಿಬ್ಬಂದಿ ಕೆಲಸ ನಿರ್ವಹಿಸುತ್ತಿದ್ದಾರೆ (ವಿವರ ನೀಡುವುದು)?

ಶ್ರೀ ಜಯವಂತ ಸುಬ್ರಾಯ (ಅಬಕಾರಿ ರಾಜ್ಯ ಸಚಿವರು):

ಅ) ಒಟ್ಟು ರೂ. 1,37,01,758 ವೆಚ್ಚ ಮಾಡಲಾಗಿದೆ.

ವರ್ಷ	ವೇತನ	ಬಾಡಿಗೆ	ವಾಹನ ನಿರ್ವಹಣೆ	ಇತರೆ ವೆಚ್ಚ	ಒಟ್ಟು
1995-96	3730328	56638	157901	213057	4157974
1996-97	3677528	41500	274716	359412	4353156
1997-98	4146259	316540	221190	506639	5190628
ಒಟ್ಟು	11554115	414728	653807	1079108	13701758